**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ವಿರಾಜಪೇಟೆ**

**ಸಿ.ಸಿ.67/2024**

| | | |
|---|---|---|
| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿ** |
| ವಿರಾಜಪೇಟೆ ನಗರ ಪೊಲೀಸ್ ಠಾಣೆ | | ಮೊಣ್ಣಪ್ಪ ಎ.ಬಿ |

**::ದೋಷಾರೋಪಣೆ ::**

**ಶ್ರೀ ಸಂತೋಷ ಕೊಠಾರಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,ವಿರಾಜಪೇಟೆ, ಆದ ನಾನು ನಿನ್ನ ಮೇಲೆ ಅಂದರೆಃ**

ಮೊಣ್ಣಪ್ಪ ಎ.ಬಿ, ತಂದೆಃ ಪೌತಿ ಬೋಜಪ್ಪ,41 ವರ್ಷ,
ವಾಸಃ ಬೀರಂಗದು, ಚಿಕ್ಕಪೇಟೆ, ವಿರಾಜಪೇಟೆ ತಾಲ್ಲೂಕು.
ಕೊಡಗು.

**ಈ ಕೆಳಗಿನಂತೆ ದೋಷಾರೋಪಣೆ ಹೊರೆಸಿದ್ದೇನೆಃ**

ದಿನಾಂಕ 02.11.2023 ರಂದು ಮಧ್ಯಾಹ್ನ 12.00 ಗಂಟೆಗೆ ವಿರಾಜಪೇಟೆ ನಗರ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ ವಿರಾಜಪೇಟೆ ನಗರದ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣದಲ್ಲಿ ದ್ವಿಚಕ್ರ ವಾಹನ ಪಾರ್ಕಿಂಗ್ ಸ್ಥಳದಲ್ಲಿ ಸಾಕ್ಷಿ–1 ರವರು ನಿಂತುಕೊಂಡಿದ್ದಾಗ ಆರೋಪಿಯಾದ ನೀವು ಬಂದು ಏಕಾಏಕಿ ಬಲಕೈ ಮುಷ್ಠಿಯಿಂದ ಸಾಕ್ಷಿ–1 ರವರ ತುಟಿಯ ಭಾಗಕ್ಕೆ ಗುದ್ದಿ, ಕೈಯಿಂದ ತಲೆಯ ಭಾಗಕ್ಕೆ ಹೊಡೆದು ದೂಡಿ ಹಾಕಿ,ಕೆಳಗೆ ಬಿದ್ದ ಸಾಕ್ಷಿ–1 ರವರ ಎದೆಯ ಭಾಗಕ್ಕೆ ಕಾಲಿನಿಂದ ಒದ್ದು, ಕೈಯಿಂದ ಕೆನ್ನೆಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಪಡಿಸಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ.ಕಲಂ 323 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆ ಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ ಆರೋಪಿಯಾದ ನೀವು ಕೃತ್ಯವನ್ನು ಮುಂದುವರೆಸಿ ಸಾಕ್ಷಿ–1 ರವರಿಗೆ ಹೊಡೆದಾಗ ಸಾಕ್ಷಿ–1 ರವರು ಏಕೆ ಹೊಡೆಯುತ್ತೀಯಾ ಎಂದು ಕೇಳಿದಕ್ಕೆ ಆರೋಪಿಯಾದ ನೀವು ಸಾಕ್ಷಿ–1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ.ಕಲಂ 504 ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಮೂರನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕದಂದು ಆರೋಪಿಯಾದ ನೀವು ಕೃತ್ಯವನ್ನು ಮುಂದುವರೆಸಿ ಸಾಕ್ಷಿ–1 ರವರಿಗೆ ಕೈಯಿಂದ ಹಲ್ಲೆ ಮಾಡಿ, ಕೆಳಕ್ಕೆ ಬೀಳಿಸಿ ಕಾಲಿನಿಂದ ಒದ್ದಿದ್ದು ಆಗ ಸಾಕ್ಷಿ–1 ರವರು ಅಲ್ಲಿಂದ ಎದ್ದು ಹೊರಟಾಗ ಆರೋಪಿಯಾದ ನೀವು ಸಾಕ್ಷಿ–1 ರವರ ದಾರಿ ತಡೆದು ಕೈಯಿಂದ ಕೆನ್ನೆಗೆ ಹೊಡೆದಿದ್ದು, ಆ ಮೂಲಕ

ಆರೋಪಿಯಾದ ನೀವು ಭಾ.ದಂ.ಸಂ.ಕಲಂ 341ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಕೊನೇಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಹಾಗೂ ದಿನಾಂಕದಂದು ಆರೋಪಿಯಾದ ನೀವು ಕೃತ್ಯವನ್ನು ಮುಂದುವರೆಸಿ ಸಾಕ್ಷಿ–1ರವರಿಗೆ ಕೈಯಿಂದ ಹಲ್ಲೆ ಮಾಡಿದಾಗ ಸಾಕ್ಷಿ–1 ರವರು ಏಕೆ ಹೊಡೆಯುತ್ತೀಯಾ ಎಂದು ಆರೋಪಿಯಾದ ನಿಮ್ಮನ್ನು ಕೇಳಿದಕ್ಕೆ ಆರೋಪಿಯಾದ ನೀವು ಸಾಕ್ಷಿ–1 ರವರಿಗೆ ಕೊಲೆ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿಯಾದ ನೀವು ಭಾ.ದಂ.ಸಂ.ಕಲಂ 506ರನ್ವಯ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯದೊಳಗೆ ಎಸಗಿರುತ್ತೀರಿ ಎಂಬುದಾಗಿದೆ.

ಮೇಲಿನ ಆರೋಪಗಳಿಗೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗುವಂತೆ ನಿಮಗೆ ನಿರ್ದೇಶಿಸಲಾಗಿದೆ.

ದಿನಾಂಕ 6 ನೇ ಫೆಬ್ರುವರಿ ಮಾಹೆ 2025. ಸಹಿಃ

**(ಸಂತೋಷ ಕೊಠಾರಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ವಿರಾಜಪೇಟೆ**

**ಸಿ.ಸಿ.67/2024**

| **ಪಿರ್ಯಾದುದಾರರು** | **ವಿರುದ್ಧ** | **ಆರೋಪಿ** |
|---|---|---|
| ವಿರಾಜಪೇಟೆ ನಗರ ಪೊಲೀಸ್ ಠಾಣೆ | | ಮೊಣ್ಣಪ್ಪ ಎ.ಬಿ |

**:: ಆ ಪಾ ದ ನೆ ::**

**ಶ್ರೀ ಸಂತೋಷ ಕೊಠಾರಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,ವಿರಾಜಪೇಟೆ, ಆದ ನಾನು ನಿನ್ನ ಮೇಲೆ ಅಂದರೆಃ**

ಮೊಣ್ಣಪ್ಪ ಎ.ಬಿ, ತಂದೆಃ ಪೌತಿ ಬೋಜಪ್ಪ,41 ವರ್ಷ,
ವಾಸಃ ಬೀರಂಗದು, ಚಿಕ್ಕಪೇಟೆ, ವಿರಾಜಪೇಟೆ ತಾಲ್ಲೂಕು.
ಕೊಡಗು.

ಪ್ರ–1: ಮೇಲಿನ ದೋಷಾರೋಪಣೆಯನ್ನು ಓದಿ, ತಿಳಿಸಿ ಹೇಳಿದ್ದು, ನಿಮಗೆ ಅರ್ಥವಾಗಿದೆಯೆ?

ಉತ್ತರಃ

ಪ್ರ–2: ನೀವು ತಪ್ಪು ಒಪ್ಪಿಕೊಳ್ಳುತ್ತೀರೋ ಅಥವಾ ವಿಚಾರಣೆಯಾಗಬೇಕೆಂದು ಇಚ್ಚಿಸುತ್ತೀರೋ?

ಉತ್ತರಃ

(ಮೇಲಿನ ದೋಪಾರೋಪಣೆಯನ್ನು ಆರೋಪಿಗಳಿಗೆ ಓದಿ, ತಿಳಿಸಿ ಹೇಳಿದ ನಂತರ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ).

ದಿನಾಂಕ 6 ನೇ ಫೆಬ್ರವರಿ ಮಾಹೆ 2025.

**(ಸಂತೋಷ ಕೊಠಾರಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ವಿರಾಜಪೇಟೆ.